REVIEWS OF LITERATURE
IMPACT FACTOR : 3.3754 (UIF) UGC APPROVED JOURNAL NO. 48385 ISSN: 2347-2723
VOLUME - 5 | ISSUE - 9 | APRIL - 2018

# ಹಿರೇ ಸಾವಳಗಿ ಶ್ರೀ ಶಿವಲಿಂಗೇಶ್ವರ ಮಠದ ಚರಿತ್ರೆ



**Dr. Mallikarjun Bassanna**
**Guest Lecturer, GFGC Jewargi, Kalaburagi, Karnataka.**

## ABSTRACT

ಧರ್ಮಗಳೆಲ್ಲ ಜಾತಿಗಳಾಗಿ ಛಿದ್ರಗೊಳ್ಳುತ್ತಿರುವ ಮತ್ತು ಮನಸ್ಸು, ಮನಸ್ಸು ಮನಸ್ಸುಗಳನ್ನು ಭಯಂಕರವಾಗಿ ಒಡೆಯುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಮಠಗಳು ಮತ್ತು ಪ್ರವಚನಗಳು ನಮ್ಮ ಕಲುಷಿತ ಮನಸ್ಸಿಗೆ ಶಾಂತಿ, ಸಮಾಧಾನಗಳ ನಿತ್ಯಾಮೃತವನ್ನು ತುಂಬಬಲ್ಲವು. ಕಾಲನ ತುಳಿತಕ್ಕೆ ಸಿಕ್ಕ ಈ ಭೂಮಂಡಲದಲ್ಲಿ ಯಾವಾಗ ಅನೀತಿ ಅಧರ್ಮ, ಅನ್ಯಾಯಗಳು ತುಂಬಿ ತುಳುಕುತ್ತವೆಯೋ ಆಗೆಲ್ಲಾ ಅನೇಕ ಮಹಾತ್ಮರು ಅವತರಿಸಿ ಧರ್ಮ ಸಂಸ್ಥಾಪಸಿಗೆದದುಂಟು ಜಾತಿ, ಮತಗಳ ಕಂದಕಗಳನ್ನು ದಾಟಿ ವಿವಿಧ ಧರ್ಮಗಳ ಮನುಷ್ಯ–ಮನುಷ್ಯರ ನಡುವಣ ಅಂತಃಕರಣಕ್ಕೆ ಸೇತುವೆಯನ್ನು ನಿರ್ಮಿಸಿ ಜಗತ್ತಿನಲ್ಲಿ ಶಾಂತಿ, ಸೌಹರ್ದ ಸೊದರತೆಗಳ ಜೀವ ಜಲವನ್ನು ಹರಿಸುವ ನಿರಂತರ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದ ಸಂತರು ಇತಿಹಾಸದ ಉದ್ದಕ್ಕೂ ಆಗಿ ಹೋಗಿದ್ದಾರೆ, ಇಂತಹ ಮಾನವ ಪ್ರೇಮಿ ಹಾಗು ವಿಶ್ವ ಬಂಧುತ್ವದ ನೆಲೆಯಿಂದ ಮೂಡಿಬಂದವರು ಸಾವಳಗಿ ಶ್ರೀ ಶಿವಲಿಂಗೇಶ್ವರರು.

## INTRODUCTION

ಕಲಬುರಗಿ ಜಿಲ್ಲೆಯ ಕಲಬುರಗಿ ತಾಲೂಕಿನ ಹಿರೇ ಸಾವಳಗಿ ಗ್ರಾಮದಲ್ಲಿ ಸುಮಾರ ಐದನೂರು ವರ್ಷಗಳಷ್ಟು ಪ್ರಾಚೀನವಾದ ವೀರಶೈವ ಮಠವಿದೆ. ಇದುವೇ ಶ್ರೀ ಶಿವಲಿಂಗೇಶ್ವರ ಮಠವೆಂದು ನಾಡಿನಲ್ಲಿ ಖ್ಯಾತಿ ಪಡೆದಿದೆ. ಈ ಮಠವು ತಾಲೂಕು ಸ್ಥಳವಾದ ಕಲಬುರಗಿಯಿಂದ ೧೬ ಕೀ.ಮೀ. ಅಂತರದಲ್ಲಿದೆ. ಐತಿಹಾಸಿಕ ದೃಷ್ಟಿಯಿಂದ ಕಲಬುರಗಿ ಜಿಲ್ಲೆ ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು ಮಳಖೇಡದ ಸಂಸ್ಥಾನಿಕರು, ಮೊಗಲವಂಶದವರು, ಬಹುಮನಿ ಅರಸರು, ವಿಜಾಪೂರದ ಆದಿಲ್‌ಶಾಹೀ ಮನೆತನದವರು ಮುಂತಾದವರ ಪ್ರಾಬಲ್ಯ ಬೀರಿದ ಜಿಲ್ಲೆಯಾಗಿದೆ.

ಶಿವಲಿಂಗೇಶ್ವರರಿಗೆ ಸಂಬಂಧಿಸಿದ ಮೂರು ಸಾವಳಗಿ ಗ್ರಾಮಗಳಿವೆ. ಒಂದು ಕಲಬುರಗಿ ಜಿಲ್ಲೆಯಲ್ಲಿದೆ ಇನ್ನೊಂದು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನಲ್ಲಿದೆ. ಮತ್ತೊಂದು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಘಟಪ್ರಭಾ ನದಿತೀರದಲ್ಲಿದೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡಗಳಲ್ಲಿ ಸುಮಾರು ೩೬೦ ಮಠಗಳು ೧೧೧೦ ಕ್ಕು ಹೆಚ್ಚು ಗದ್ದುಗಗಳಿವೆ ಎಂದು ಹೇಳಲಾಗುತ್ತದೆ.

೧೭ನೇ ಶತಮಾನದ ಮಧ್ಯಕಾಲದಲ್ಲಿ ಕ್ರಿ.ಶ. ೧೬೪೫ರ ಚೈತ್ರ ಮಾಸದಂದು ಶಿವಾವತಾರಿ ಶ್ರೀ ಶಿವಲಿಂಗೇಶ್ವರರು ಕಲಬುರಗಿ ತಾಲೂಕಿನ ಅತ್ಯಂತ ಪುಟ್ಟ ಗ್ರಾಮ ಕೊಳ್ಳೂರಿನ ಹಿರಿಯಗೌಡ ಲಿಂಗಬಸಪ್ಪ ಹಾಗು ಮಲ್ಲಮ್ಮರ ಉದರದಲ್ಲಿ ಶಿಶುವಾಗಿ ಅವತರಿಸಿದವರು. ಬಾಲಯೋಗಿಯಾದ ಶಿವಲಿಂಗೇಶ್ವರನು ಪವಾಡಪುರುಷ, ಲೀಲಾ ಮೂರ್ತಿ, ವಾಕ್‌ಸಿದ್ಧಿಪುರುಷನಾದ ತನ್ನ ೧೨ನೇ ವಯಸ್ಸಿನಲ್ಲಿ ಕೊಳ್ಳೂರಿನಿಂದ ಹಿರೇಸಾವಳಗಿಗೆ ಆಗಮಿಸಿದರು. ಸಾವಳಗಿಯಿಂದ ಉತ್ತರಕ್ಕಿರುವ ಈಗಿನ "ಶಿವಲಿಂಗ ಧರಿ" ಎಂದು ಕರೆಸಿಕೊಳ್ಳುವ ಕಾನನದಲ್ಲಿ ಅನುಷ್ಠಾನಗೈದು, ಹಲವು ಜನರಿಗೆ ಉಪಕಾರದ ಕಾರ್ಯಗಳನ್ನು ಮಾಡಿರುತ್ತಾರೆ. ಅಲ್ಲಿಂದ ಶಿವಪುರದ ಗುರುಸಿದ್ದದೇವರ ಸಹಾಯದಿಂದ ಶಿವಲಿಂಗೇಶ್ವರರು ಅಷ್ಟಮಾಸಿದ್ಧಿಗಳು, ಯೋಗ ವಿದ್ಯಾ ಇವುಗಳ ಸಾಧನೆಯ ವಿಧಾನ ಬಳಸುವ ವಿಧಿಯನ್ನು ಕಲಿತುಕೊಂಡರು.

ಶಿವಪುರದ ಗುರುಸಿದ್ಧರ ಆಜ್ಞೆಯ ಪ್ರಕಾರ ಶ್ರೀ ಶಿವಲಿಂಗೇಶ್ವರರು ಸಾವಳಗಿಯ ಪಶ್ಚಿಮಕ್ಕಿರುವ ಫಲಭರಿತ ಪ್ರಶಸ್ತವಾಗಿರುವ ಹೊಲವೊಂದಕ್ಕೆ ಆಗಮಿಸಿ ಅಲ್ಲಿರುವ ಕಾಂತಾರ ಮರದ ಕೆಳಗೆ ಕುಳಿತು ದ್ಯಾನಸಕ್ತರಾದರು. ಅಲ್ಲಿ ಮೊದಲಿಗೆ ವ್ಯಾಪಾರಸ್ಥರಿಂದ ಗದ್ದಿಗೆ ನಿರ್ಮಾಣವಾಯಿತು, ಆದರೆ ಅವರು ಸ್ವಲ್ಪ ಹೆಚ್ಚಿಗೆ ಖರ್ಚು ತಗುಲಿತು ಎಂದು ಲೆಕ್ಕ ಹಾಕಿದಾಗ ಆಗ ಶಿವಲಿಂಗೇಶ್ವರರು ಆ ಗದ್ದಿಗೆಯಲ್ಲಿ ನಾನು ಪ್ರವೇಶಿಸುವುದಿಲ್ಲ ಹೀನರೇ ಇದರಲ್ಲಿ ಕುಳಿತುಕೊಳ್ಳಲಿ ಎಂದು ಬಿಟ್ಟರು ಮುಂದೆ ಈ ಹಿರಿಯ ಗದ್ದಿಗೆಯ ಎದುರುಗಡೆ ವಿಶಾಲಸ್ಥಳದಲ್ಲಿ ಸಾವಳಗಿ ಹಾಗು ಪಟ್ಟಣದ ಗ್ರಾಮದ ಭಕ್ತರಿಂದ ಸುಮಾರು ೮ ಎಕರೆ ಭೂಮಿಯಲ್ಲಿ ಮಹಾಮಂದಿರ ನಿರ್ಮಾಣವಾಯಿತ್ತು.

ಈ ಮಠದಲ್ಲಿ ಮಹಾಮನೆ, ಪ್ರಸಾದಮನೆ, ಗುರುಮಠ ಕಲ್ಮಠ, ವಿಶಾಲವಾದ ಅಂಗಳ, ಮಹಾದ್ವಾರ ಒಳದ್ವಾರ, ವಿಶಾಲವಾದ ಕಟ್ಟೆಗಳು ಹೀಗೆ ಭವ್ಯಮಂದಿರ ನಿರ್ಮಾಣವಾಯಿತು.

ಶಿವಲಿಂಗೇಶ್ವರ ಮಠವು ಕನ್ನಡ ನಾಡಿಗೆ ಪ್ರಸಿದ್ದಿಯಾಗಿದ್ದು, ಸಾವಳಗಿಯು ಧರ್ಮಕೇಂದ್ರವಾಗಿ, ಪುಣ್ಯಸ್ಥಳವಾಗಿ ಮೂಲ ಕೇಂದ್ರದ ಹೆಸರೇ ಪುಣ್ಯಪುರುಷರ ಹೆಸರಿಗೆ ಅಂಟಿಕೊಂಡಿದೆ. ಅದು ಎಷ್ಟರ ಮಟ್ಟಿಗೆ ಅಂದರೆ, ಯಾರಾದರೂ ಸಾವಳಗಿ ಎಂದರೆ ಶಿವಲಿಂಗೇಶ್ವರ ಸಾವಳಗಿ ಏನು? ಎಂದು ಕೇಳುಮಟ್ಟಿಗೆ ಪ್ರಸಿದ್ಧಿಪಡೆದುಕೊಂಡಿದೆ.

VOLUME - 5 | ISSUE - 9 | APRIL - 2018

ಸಾವಳಗಿ ಮಠದ ಮೂಲ ಕತೃಗಳಾದ ಶ್ರೀ ಶಿವಲಿಂಗೇಶ್ವರರು ಅಂತ್ಯಜಳಾದ ಲಿಂಗಮ್ಮನಿಗೆ ಲಿಂಗ ದೀಕ್ಷಾ ಸಂಸ್ಕಾರ ನೀಡಿ ಅವಳನ್ನು ಮತ್ತು ಅವಳ ಮನೆತನವನ್ನು ಉದ್ಧಾರ ಮಾಡಿದ್ದಾರೆ. ಈ ಹಿಂದೆ ವಚನಕಾರನಾದ ಉರಿಲಿಂಗ ಪೆದ್ದಿಯನ್ನು ಉರಿಲಿಂಗ ದೇವರ ಕೃಪೆಯಿಂದ ಅಂತ್ಯಜನಾಗಿ ಹುಟ್ಟಿ, ಕಳ್ಳನಾಗಿಬಾಳಿ, ಪಾಪಿ ಎಂದು ತಿರಸ್ಕರಿಸಲ್ಪಟ್ಟಿದ್ದ ಪೆದ್ದಣ್ಣ ದೀಕ್ಷೆ ಹೊಂದಿ ಉರಿಲಿಂಗ ಪೆದ್ದಿಯಾದ. ಗುರುವಿಗೆ ತಕ್ಕ ಶಿಷ್ಯನಾದ ವೇದಾಂಗ ಉಪನಿಷತ್ತು, ಪುರಾಣ, ಇತಿಹಾಸ ಶಾಸ್ತ್ರ ಪಾರಂಗತನಾಗಿ ವಚನಕಾರನಾಗಿ ಪರಿವರ್ತನಾದನು. ಹಾಗೆಯೇ ಶಿವಲಿಂಗೇಶ್ವರರು ಕೂಡ ಶ್ರೀ ಮಠದ ಒಳಾಂಗಣ, ಹೊರಾಂಗಣವನ್ನು ಕಸಗುಡಿಸುವ ಕೆಲಸ ಮಾಡುತ್ತಿದ್ದ ಅಂತ್ಯಜ (ದಲಿತ) ಲಿಂಗಮ್ಮಳಿಗೆ ಲಿಂಗಧಾರಣೆ ಮಾಡಿದರು. ಲಿಂಗಮ್ಮನನ್ನು "ಶಿವಲಿಂಗಮ್ಮ" ನನ್ನಾಗಿ ಮಾಡಿದರು ಗಂಡ, ಮಗ ಸೊಸೆಯರು ಲಿಂಗಧರಿಸಿಕೊಂಡರು, ದಿನಾಲೂ ಹಣೆಗೆ ವಿಭೂತಿ ಧರಿಸಿಕೊಂಡು ಶ್ರೀ ಗುರುಮಠದ ಅಂಗಳ ಕಸ ಹಸನಗೊಳಿಸುವದರ ಜೊತೆಗೆ ಕಾಯ, ವಾಚ, ಮನಸ್ಸು ಸಹ ಹಸನ ಮಾಡಿಕೊಂಡರು. ಈಡೀ ಮನೆತನವೇ ಉದ್ಧಾರವಾಯಿತು. ಭಕ್ತಿಯಿಂದ ದುಡಿದ ಲಿಂಗಮ್ಮ ಜ್ಞಾನಿಯಾದಳು. ಭಕ್ತಿ–ಜ್ಞಾನ ಕೂಡಿಕೊಂಡು ವೈರಾಗ್ಯ ತಾಳಿದಳು ಮಹಾಪುಣ್ಯವಂತೆ ಶಿವಲಿಂಗಮ್ಮನ ಸಮಾಧಿ ಶ್ರೀ ಮಠದ ಅಂಗಳದಲ್ಲಿ ಇಂದಿಗೂ ಇದೆ. ಇದು ಶ್ರೀ ಮಠದ ಮೂಲದ್ವಾರ ಪ್ರವೇಶಿಸಿದಾಗ ಪೂರ್ವಕ್ಕೆ ಮುಖಮಾಡಿ ನಿರ್ಮಿಸಲ್ಪಟ್ಟ ಗುಡಿಯೇ ಲಿಂಗಮ್ಮನದ್ದು.

ಈ ಮಠವು ಹಿಂದು–ಮುಸ್ಲಿಂರ ಭಾವೈಕ್ಯತೆಯ ಮಠವೆಂದು ಪ್ರಸಿದ್ಧಿ ಪಡೆದಿದೆ. ಕಲಬುರಗಿ ರೋಜಾದ ಸೂಫಿ ಬಂದೇನವಾಜದರ್ಗಾದ ೧೭ನೇ ಉತ್ತರಾಧಿಕಾರಿಯಾದ ಖಾಜಾವಲಿ ಹುಸೇನ ಅಲಿಯಸ್ ಹುಸೇನ ಶಾಹಾವಲಿ ಸಾಗಿ ಇವರು ಶಿವಲಿಂಗೇಶ್ವರ ಶಿವಯೋಗಿಗಳಿಗೆ ರಾಜ ಮನ್ನಣೆ ನೀಡಿದ ಮೇಲೆ ಮುಸ್ಲಿಂರು ಮಠದ ಭಕ್ತರಾಗಿ, ಸೇವಕರಾಗಿ, ದುಡಿಯುತ್ತಿದ್ದದು ಕಾಣಬಹುದಾಗಿದೆ. ಉದಾಹರಣೆ ಎಂಬಂತೆ ಶ್ರೀ ರುಕ್ಮುದ್ದೀನ್ ಮತ್ತು ಶ್ರೀಮತಿ ಸುಲ್ತಾನಬಿ ಇವರ ಮಗನಾಗಿ ಜನಿಸಿದ ಮೊಹಿನೋದ್ದಿನ್ ಮಠದ ಸೇವಕನಾಗಿ, ಭಕ್ತನಾಗಿ ಶ್ರೀ ಮಠದಲ್ಲಿ ಇಂದಿಗೂ ಇದ್ದಾನೆ.

ಮಠದ ಜಾತ್ರಾ ಸಂದರ್ಭದಲ್ಲಿ ಪಲ್ಲಕಿ ಸೇವೆಯನ್ನು ಮಸ್ಲಿಮರೇ ನೆರವೇರಿಸಿ ಕೊಡುತ್ತಾರೆ. ಮಠದ ಧಾರ್ಮಿಕ ಕಾರ್ಯಗಳಲ್ಲಿ ವೀರಶೈವರ ಜೊತೆಗೆ ಮುಸ್ಲಿಮರು ತಮ್ಮ ಸಮಪಾಲಿನ ಸೇವೆಯನ್ನು ಸಲ್ಲಿಸುತ್ತಾರೆ. ಮೊಹರಂ ಹಬ್ಬವನ್ನು ಹಿಂದೂ–ಮುಸ್ಲಿಂರು ಕೂಡಿಕೊಂಡು ಆಚರಿಸುತ್ತಾರೆ. ಮೊಹರಂ ಕಡೆ ದಿನ ಗ್ರಾಮ ಪ್ರದಕ್ಷಿಣೆಯೊಂದಿಗೆ ಶ್ರೀ ಮಠಕ್ಕೆ ಆಗಮಿಸಿ ದೇವರ ದರ್ಶನ ಪಡೆದು ಹಿಂದಿರುಗುತ್ತಾರೆ.

ಲಾಲ ಹೈದರ್ ಸಾಹೇಬ ಎಂಬ ಸಂತನ ದರ್ಗಾ ಹಿರೇ ಸಾವಳಗಿಯಲ್ಲಿದ್ದು. ಈ ಲಾಲ ಹೈದರ ಸಾಹೇಬನ ಮೊಹರಂ ಹಬ್ಬ ಹೆಚ್ಚು ಹಿಂದುಗಳೇ ಆಚರಿಸುತ್ತಾರೆ. ಲಾಲ ಹೈದರ ಸಾಹೇಬರ್ ಪಂಜಿ ಪರಂಪರಾಗತವಾಗಿ ಶ್ರೀ ಕಾಳಪ್ಪ (ಗಂಗಾಮತ) ಶ್ರೀ ಶರಣಯ್ಯ (ಈಳಿಗ) ಪ್ರಸ್ತುತ ಶ್ರೀ ಪಿರಯ್ಯನವರು ಮೊಹರಂ ಯಾತ್ರೆಯ ನೇತೃತ್ವವಹಿಸಿಕೊಳ್ಳುತ್ತಾ ಬಂದಿದ್ದಾರೆ. ಹಿರೇ ಸಾವಳಗಿಯಲ್ಲಿ ಆಚರಿಸುವ ಮೊಹರಂ ಹಬ್ಬ ಹಿಂದೂ–ಮುಸ್ಲಿಂರ ಭಾವ–ಸಂಗಮವಾಗಿದೆ.

ಸಾವಳಗಿ ಶ್ರೀ ಶಿವಲಿಂಗೇಶ್ವರರು ಕಲಬುರಗಿಯ ಖಾಜಾ ಬಂದೇನವಾಜ ದರ್ಗಾದ ಉರುಸಿಗೆ ಹೋಗಿದ್ದು, ಅದರ ಸವಿನೆನಪಿಗಾಗಿ ಶ್ರೀಗಳಿಗೆ ಬಂದೇನವಾಜ ಯವರು ತಮ್ಮ ಪ್ರೀತಿಯ ದ್ಯೂತಕವಾಗಿ ಶೈಲ–ಶಮನ (ಟೋಪಿ) ಹಸಿರು ಶಾಲು ಹೊದಿಸಿ, ಇವು ಸದಾ ನಿಮ್ಮ ಹತ್ತಿರ ಇರಲೆಂದು ವಿನಂತಿಯ ಮೆರೆಗೆ ಈ ಶೈಲ–ಶಮನ, ಹಸಿರು ಶಾಲು ಇಂದಿಗೂ ಹಿರೇ ಸಾವಳಗಿಯ ಶ್ರೀ ಶಿವಲಿಂಗೇಶ್ವರರ (ಕರ್ತೃಗದ್ದಿಗೆ) ತಲೆಯ ಮೇಲಿದೆ. ವಿಶೇಷ ದಿವಸಗಳಾದ ಮಕರ–ಸಂಕ್ರಮಣ, ದವನದ ಹುಣ್ಣಿಮೆ ಯಾತ್ರಾ ಮಹೋತ್ಸವದಂದು ಶ್ರೀ ಮಠದ ಪೀಠಾಧಿಕಾರಿಗಳು ಇಂದಿಗೂ ಧರಿಸಿಕೊಳ್ಳುತ್ತಾರೆ.

## ಹಿರೇ ಸಾವಳಗಿ ಸಂಸ್ಥಾನಪೀಠ ಪರಂಪರೆ :

ಹಿರೇ ಸಾವಳಗಿಯಲ್ಲಿ ನಿರ್ಮಲಯೋಗ ಪೀಠ ಸ್ಥಾಪಸಿ ಕ್ರಿ.ಶ. ೧೬೭೮ರಲ್ಲಿ ಸ್ಥಾಪನೆಯಾಗಿರಬಹುದೆಂದು ಹೇಳಲಾಗುತ್ತಿದೆ. ಈ ಮಠದ ನಿರ್ಮಾಣಕ್ಕೆ ಫಲವತ್ತಾದ ಭೂಮಿಯನ್ನು ಉಂಬಳಿಯಾಗಿ ಹಿರೇ ಸಾವಳಗಿಯ ಗೌಡರು ನೀಡಿದ್ದಾರೆಂದು ಪ್ರತಿತಿಯಿದೆ.

ಹೀಗೆ ಸ್ಥಾಪನೆಯಾದ ಶ್ರೀ ಶಿವಲಿಂಗೇಶ್ವರ ಮಠವು ಶ್ರೀ ಶಿವಲಿಂಗೇಶ್ವರ ಶಿವಯೋಗಿಗಳ ನಂತರ ಉತ್ತರಾಧಿಕಾರಿಯಾಗಿ ನೇಮಕಗೊಂಡವರು ಹಿರೇ ಸಾವಳಗಿಯೆ ಬುಳ್ಳಾ ಮನೆತನ (ಮಾಲಿ ಪಾಟೀಲ)ದ ಮಲ್ಲಣ್ಣ ಬಸಮ್ಮ ದಂಪತಿಗಳ ಮಗನೇ ಬಾಲ ಮಹಾಂತೇಶ್ವರರು, ಇವರು ಮಠದ ಆಡಳಿತ ನಡೆಸಿ, ಶ್ರೀ ಮಠದ ಪರಂಪರೆ ಬೆಳೆಯುವಂತೆ ಮಾಡಿದವರು.

ಶ್ರೀ ಶಿವಲಿಂಗೇಶ್ವರ ಸಂಸ್ಥಾನ ಮಠಕ್ಕೆ ಈ ತನಕ ೧೪ ಪೀಠಾಧಿಕಾರಿಗಳು ಮಠದ ಅಧಿಕಾರ ನಡೆಸಿಕೊಂಡು ಬಂದಿದ್ದು ಪ್ರಸ್ತುತ ೧೫ ಪೀಠಾಧಿಕಾರಿಯಾಗಿ ದಿನಾಂಕ:೨೫.೦೯.೨೦೦೨ ರಂದು ಶ್ರೀ ಮ.ನಿ.ಪ್ರ ಗುರುನಾಥಯ್ಯ ಮಹಾಸ್ವಾಮಿಗಳು ಅಧಿಕಾರ ವಹಿಸಿಕೊಂಡಿದ್ದಾರೆ.

## ಗುರು ಪರಂಪರೆ :

೧) ಶ್ರೀಮತ್ ನಿರಂಜನ್ ಜಗದ್ಗುರು ಶ್ರೀ ಶಿವಲಿಂಗೇಶ್ವರ ಶಿವಯೋಗಿ (೧೬೪೫–೧೭೫೨).
೨) ಬಾಲ ಮಹಾಂತೇಶ್ವರರು.
೩) ಶ್ರೀ.ಮ.ನಿ.ಪ್ರ. ಬಸವಲಿಂಗ ಯತಿನರರು
೪) ಶ್ರೀ.ಮ.ನಿ.ಪ್ರ. ಷಡಕ್ಷರ ದೇವರು
೫) ಶ್ರೀ.ಮ.ನಿ.ಪ್ರ. ಪ್ರಭುಲಿಮಗ ಸ್ವಾಮಿಗಳು
೬) ಶ್ರೀ.ಮ.ನಿ.ಪ್ರ. ಶಿವಲಿಂಗಯತಿಗಳು
೭) ಶ್ರೀ.ಮ.ನಿ.ಪ್ರ. ಮಲ್ಲಿಕಾರ್ಜುನ ಸ್ವಾಮಿಗಳು
೮) ಶ್ರೀ.ಮ.ನಿ.ಪ್ರ. ಶಿವಮೂರ್ತಯ್ಯ ಸ್ವಾಮಿಗಳು
೯) ಶ್ರೀ.ಮ.ನಿ.ಪ್ರ. ಚೆನ್ನಬಸವ ದೇವರು (ಮಾಲಗಾರ)
೧೦) ಶ್ರೀ.ಮ.ನಿ.ಪ್ರ. ಚೆನ್ನಬಸವಯ್ಯ ಸ್ವಾಮಿಗಳು (ಯೋಗೇಶ್ವರ)

೧೧) ಶ್ರೀ.ಮ.ನಿ.ಪ್ರ. ಮಲಕಯ್ಯ ಸ್ವಾಮಿಗಳು (ಗ್ವಾಳಸಾರ) (೧೯೦೨–೧೯೧೨)
೧೨) ಶ್ರೀ.ಮ.ನಿ.ಪ್ರ. ಮರಿದೇವರು (ಹಡಗಿರ್) (೧೯೧೭–೧೯೪೨)
೧೩) ಶ್ರೀ.ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು (ಹಡಗಿಲ) (೧೯೪೨–೧೯೮೮)
೧೪) ಶ್ರೀ.ಮ.ನಿ.ಪ್ರ. ಮಲ್ಲಿಕಾರ್ಜುನ ಮಹಾಸ್ವಾಮಿಗಳು (ಹಿರೇ ಸಾವಳಗಿ (೧೯೮೮–೨೦೦೨)
೧೫) ಶ್ರೀ.ಮ.ನಿ.ಪ್ರ. ಗುರುನಾಥಯ್ಯ ಮಹಾಸ್ವಾಮಿಗಳು (ಹಿರೇ ಸಾವಳಗಿ) (೨೦೦೨–ಪ್ರಸ್ತುತ)

ಶ್ರೀ ಶಿವಲಿಂಗೇಶ್ವರರು ಲೋಕ ಸಂಚಾರ ಗೈದು ಸುಮಾರು ೩೬೦ ಮಠಗಳು ಸ್ಥಾಪನೆ ಮಾಡಿದ್ದಾರೆ ಎಂದು ಹೇಳಲಾಗುತ್ತಿದ್ದು. ಈ ಮಠಗಳಲ್ಲಿ ಕೆಲವು ಮಠಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿವೆ. ಇನ್ನುಳಿದ ಕೆಲವು ಮಠಗಳು ಹಿರೇ ಸಾವಳಗಿಯ ಶ್ರೀ ಮಠದ ಅಧೀನ ಮಠಗಳಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

**ಗ್ರಂಥ ಋಣ :**

೧) ಸಾವಳಗಿ ಶ್ರೀ ಶಿವಲಿಂಗೇಶ್ವರ ಪುರಾಣ – ಸಂ. ಶ್ರೀ ಮನ್ನಿರಂಜನ ಜಗದ್ಗುರು ಸಿದ್ಧರಾಮ ಶಿವಯೋಗಿಗಳು.
೨) ಯೋಗಿಕುಲ ಚಕ್ರವರ್ತಿ ಸಾವಳಗಿ ಜಗದ್ಗುರು – ಡಾ. ಬಸವರಾಜ ಎಂ. ಕಲಶೆಟ್ಟಿ ಶ್ರೀ ಶಿವಲಿಂಗೇಶ್ವರ ದರ್ಶನ.
೩) ಕರ್ನಾಟಕದ ಸೂಫಿಗಳು – ರಹಮತ್ ತರೀಕೆರೆ